


ಠಕ್ಕುಗಳ ಬಗ್ಗೆ ಬಹಳ ತೀಕ್ಷ್ಣವಾಗಿ ಮಾತಾಡಿದ್ದರು. ಅವರು ಬರೆದ ಮಕ್ಕಳ ಪದ್ಯ, ಕಥೆಗಳ ಬಗ್ಗೆ ಪ್ರಸಾದ್ ಏನಾದರೂ ಕೀಟಲೆ ಮಾಡುವುದಿತ್ತು. ಒಮ್ಮೆ ತಿರುಮಲೇಶರು ಬರೆದ ಮಕ್ಕಳ ಕಥೆಯೊಂದರ ಬಗ್ಗೆ ಪ್ರಸಾದ್ ಮಾತಾಡುತ್ತಿದ್ದರೆ, ಮಗುವಿನ ಉಲ್ಲಾಸದಲ್ಲಿ ಕೆವಿಟಿ, 'ಅಚ್ಛಾ, ಇದು ಇಂಟ್ರೆಸ್ಟಿಂಗ್ ಆತಾ' ಅಂದರು. ಎದುರಿಗಿರುವವರ ಮಾತು ಆಲಿಸುವಾಗ ಅವರ ಶ್ರದ್ಧೆ, ಕಣ್ಮಣಿಯ ಹೊಳಪು ಗಮನಿಸಬೇಕು.

ದಿನಕ್ಕೆ ಒಂದು ಪುಟವನ್ನಾದರೂ ದೊಡ್ಡ ದನಿಯಲ್ಲಿ ಓದಿಕೊಳ್ಳಬೇಕು ಅನ್ನುತ್ತಿದ್ದರು. ಅದರಲ್ಲೂ ಇಂಗ್ಲೀಷ್ ಓದುವಾಗ ನಾವು ದೊಡ್ಡದಾಗಿ ಓದಬೇಕು. ಅದನ್ನು ಆಲಿಸಬೇಕು ಅಂದಿದ್ದರು. ಟೀಪಾಯ್ ಮೇಲೆ ಮಗ ಓದುತ್ತಿದ್ದ 'ವಾರ್ ಅಂಡ್ ಪೀಸ್' ಪುಸ್ತಕವಿತ್ತು. ಅದನ್ನೆತ್ತಿಕೊಂಡು ಒಂದು ಪ್ಯಾರಾ ಓದಿದ್ದರು. ತತ್ವಶಾಸ್ತ್ರ, ಜಗತ್ತಿನ ಚರಿತ್ರೆ, ರಾಜಕೀಯಗಳ ಬಗ್ಗೆ ಅನಘ ಆಸಕ್ತನಾಗಿದ್ದರಿಂದ ಅವನ ಜೊತೆಗಿನ ಚರ್ಚೆ ಅವರಿಗೆ ಕಿಕ್ ಕೊಡುತ್ತಿತ್ತು. ವಸಾಹತುಶಾಹಿ ಎಂಬುದು ನಮ್ಮ ವ್ಯಕ್ತಿತ್ವ ರೂಪುಗೊಳ್ಳುವಿಕೆಯಲ್ಲಿ ಬೀರುತ್ತಿರುವ ಪರಿಣಾಮದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಮಕ್ಕಳ ಮಾತುಗಳನ್ನು ಉತ್ತೇಜಿಸುತ್ತ ಕೇಳುವುದನ್ನು ಬಹಳ